Karnatak Law Society's
**Vishwanathrao Deshpande Institute of Technology**
**(Approved by AICTE, New Delhi. Affiliated to VTU, Belagavi)**
**(Recognised Under Section 2(f) by UGC, New Delhi)**
**Udyog Vidya Nagar, Haliyal – 581329, Dist: Uttar Kannada (Karnataka)**
**Phone: 08284-220861, 220334, 221409, Fax: 08284-220813**
**www.klsvdit.edu.in principal@klsvdit.edu.in**

Date: 27–10–2021

**ಪತ್ರಿಕಾ ಪ್ರಕಟಣೆ:**

## ನವೀನ ಕೃಷಿ ಉದ್ಯಮ ಪ್ರೋತ್ಸಾಹದ ಕುರಿತು ಮಾಹಿತಿ ಕಾರ್ಯಕ್ರಮ

ಕರ್ನಾಟಕ ಲಾ ಸೊಸೈಟಿಯ ವಿಶ್ವನಾಥರಾವ್ ದೇಶಪಾಂಡೆ ತಾಂತ್ರಿಕ ಮಹಾವಿದ್ಯಾಲಯ, ಹಳಿಯಾಳದಲ್ಲಿ ದಿ. 27–10–2021 ರಂದು ನವೀನ ಕೃಷಿ ಆವಿಷ್ಕಾರ ಮತ್ತು ಔದ್ಯಮಿಕ ಅವಕಾಶಗಳ ಕುರಿತು ಮಾಹಿತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಧಾರವಾಡ ಕೃಷಿ ವಿಶ್ವವಿದ್ಯಾಲಯದ ಕೃಷಿ ಉದ್ಯಮ ಪ್ರೋತ್ಸಾಹ ಕೇಂದ್ರ "ಕೃಷಿಕ್" ನ ವ್ಯವಸ್ಥಾಪಕರಾದ ಶ್ರೀಮತಿ. ಕಂಚನ್ ಧಾರ್ವಾರ್ ಮಾತನಾಡುತ್ತ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯು ಕೃಷಿ ಕುರಿತು ಹೊಸ ಆವಿಷ್ಕಾರ ಮತ್ತು ನವೋದ್ಯಮಗಳ ಸ್ಥಾಪನೆಗೆ ನೀಡುತ್ತಿರುವ ಪ್ರೋತ್ಸಾಹದ ಕುರಿತು ಮಾಹಿತಿ ನೀಡಿದರು. ಈ ಯೋಜನೆಯಡಿಯಲ್ಲಿ ಕೃಷಿ ಆವಿಷ್ಕಾರಗಳಿಗಾಗಿ ಗರಿಷ್ಠ 5 ಲಕ್ಷ ರೂಪಾಯಿಗಳು ಮತ್ತು ನವೋದ್ಯಮ ಸ್ಥಾಪನೆಗೆ ಮೂಲ ಬಂಡವಾಳವಾಗಿ ಗರಿಷ್ಠ 25 ಲಕ್ಷ ರೂಪಾಯಿಗಳ ವರೆಗೆ ಸಹಾಯ ಧನ ನೀಡಲಾಗುವುದು ಎಂದು ನುಡಿದರು. ಉಪಸ್ಥಿತರಿದ್ದ ಮತ್ತೊಬ್ಬ ಅಧಿಕಾರಿಗಳಾದ ಡಾ॥ ಶ್ರೇಯಾ ಅಮರಾಪುರಕರ್ ಅವರು ಮಾತನಾಡುತ್ತ ಈ ಯೋಜನೆಯಡಿಯಲ್ಲಿ ವಿದ್ಯಾರ್ಥಿಗಳು, ಪ್ರತಿಪರ ರೈತರು ಮತ್ತು ಕೃಷಿ ಕ್ಷೇತ್ರದಲ್ಲಿ ರಚನಾತ್ಮವಾಗಿ ಕೆಲಸ ಮಾಡುತ್ತಿರುವ ಸಂಸ್ಥೆಗಳು ಕೃಷಿ ಉದ್ಯಮ ಸ್ಥಾಪನೆಗೆ ಆರ್ಥಿಕ ಸಹಾಯ ಮತ್ತು ತಜ್ಞರ ಸಲಹೆ ಪಡೆದುಕೊಳ್ಳಬಹುದು ಎಂದು ನುಡಿದರು.

ಮಹಾವಿದ್ಯಾಲಯದ ಸಂಶೋಧನಾ ವಿಭಾಗ ಮುಖ್ಯಸ್ಥರಾದ ಡಾ॥ ಮಹೇಂದ್ರ ಎಮ್ ದೀಕ್ಷಿತ್ ಸಭಿಕರನ್ನು ಸ್ವಾಗತಿಸಿದರು. ಕೈಗಾರಿಕಾ ಸಂಪರ್ಕಾಧಿಕಾರಿಗಳಾದ ಪ್ರೊ. ಎಸ್ ಡಿ ಕುಲಕರ್ಣಿ ವಂದಿಸಿದರು. 100 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಮತ್ತು ಬೋಧಕ ಸಿಬ್ಬಂದಿಗಳು ಉಪಸ್ಥಿತರಿದ್ದರು ಎಂದು ಪ್ರಾಂಶುಪಾಲರಾದ ಡಾ॥ ವಿ ಎ ಕುಲಕರ್ಣಿ ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಾಂಶುಪಾಲರು

Principal
KLS Vishwanathrao Deshpande
Institute of Technology, Haliyal


KRISHIK- AGRIBUSINESS INCUBATOR
Center of Excellence
University of Agricultural Sciences, Dharwad
Krishi Nagar , Dharwad- 580005
•Innovation and Agripreneurship program of RKVY- RAFT
•Designated Centre of Excellence (CoE) &
KLS